ದಿನಾಂಕ 10.04.2019 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

**ಪಾಟೀಸವಾಲುಃ- ಆರೋಪಿ 5 ರಿಂದ 7 ರವರ ಪರವಾಗಿ ಶ್ರೀ.ಎಸ್.ಎಂ. ವಕೀಲರಿಂದಃ**

59. ಆರೋಪಿ 5 ರಿಂದ 7 ರವರನ್ನು ವಶಕ್ಕೆ ಪಡೆದುಕೊಳ್ಳಲಾಗಿದೆ ಎಂಬ ಜಾಲಮಂಗಲ ರಸ್ತೆ ಮಂಜುನಾಥ ನಗರದಿಂದ ನಮ್ಮ ಠಾಣೆಗೆ ಅಂದಾಜು 1.5 - 2 ಕಿ.ಮೀ. ದೂರ. ಆರೋಪಿಗಳಿಂದ ವಶಪಡಿಸಿಕೊಂಡ ವಸ್ತುಗಳನ್ನು ಪ್ರಿಸನರ್ಸ್ ಸರ್ಚ್ ಲಿಸ್ಟ್ ನಲ್ಲಿ ಅಳವಡಿಸಿಕೊಂಡಿಲ್ಲ. ಕಾರಣ ಅದರ ಅವಶ್ಯಕತೆ ಇರುವುದಿಲ್ಲ.

60. ಆರೋಪಿ-5 ರಿಂದ 7 ರವರನ್ನು ಪತ್ತೆ ಹಚ್ಚುವ ಸಂಬಂಧವಾಗಿ ನಾನು ನೇಮಕ ಮಾಡಿದ್ದೇನೆ ಎನ್ನಲಾದ ಸಿಬ್ಬಂದಿಗಳಿಗೆ ಆರೋಪಿಗಳ ಚಹರೆಯ ಕುರಿತು ಫೋಟೋಗಳನ್ನು ಕೊಟ್ಟಿಲ್ಲ. ಆದರೆ ಸಂಪೂರ್ಣವಾಗಿ ವಿವರಗಳನ್ನು ನೀಡಿದ್ದೇನೆ. ಆರೋಪಿ-5 ರಿಂದ 7 ರವರನ್ನು ಪತ್ತೆ ಹಚ್ಚಲು ಕಳುಹಿಸಿ ಕೊಡುವ ಸಂದರ್ಭದಲ್ಲಿ 1 ನೇ ಆರೋಪಿಯನ್ನು ಜೊತೆಯಲ್ಲಿ ಕಳುಹಿಸಿಕೊಟ್ಟಿಲ್ಲ.

61. ಆರೋಪಿ-5 ರಿಂದ 7 ರವರಿಂದ ವಸ್ತುಗಳನ್ನು ಠಾಣೆಯಲ್ಲಿ ಅಮಾನತು ಪಡಿಸಿಕೊಳ್ಳುವ ಸಂದರ್ಭದಲ್ಲಿ ವಿಡಿಯೋ ರೆಕಾರ್ಡಿಂಗ್

ಮಾಡಿಲ್ಲ ಎನ್ನುವುದು ಸರಿ. ಆರೋಪಿ-1 ಮತ್ತು ಆರೋಪಿ-5 ರಿಂದ 7 ರವರ ನಡುವೆ ಸಂಪರ್ಕ ಇತ್ತು ಇದೆ ಎಂದು ತೋರಿಸಲು ಅವರ ನಡುವೆ ಆದ ಕರೆಗಳ ಸಂಭಾಷಣೆಯ ಸಂಬಂಧವಾಗಿ ಸಿಡಿಆರ್‌ಗಳನ್ನು ಪಡೆದುಕೊಂಡಿಲ್ಲ ಎನ್ನುವುದು ಸರಿ.

62. ದೂರಿನಲ್ಲಿ 3 ಜನ ಅನಾಮಧೇಯ ವ್ಯಕ್ತಿಗಳು ಎಂದು ನಮೂದಿಸಲಾಗಿದೆ ಎನ್ನುವುದು ಸರಿ. ಆರೋಪಿಗಳು ಒಂದು ಸ್ಥಳದಲ್ಲಿ ನಿಂತುಕೊಂಡು ಮನೆಯನ್ನು 1 ನೇ ಆರೋಪಿಗೆ ತೋರಿಸಿದ ಎನ್ನಲಾದ ಜಾಗದಲ್ಲಿ ಪಂಚನಾಮೆಯನ್ನು ಮಾಡಿಲ್ಲ ಎನ್ನುವುದು ಸರಿಯಲ್ಲ.

63. ಆರೋಪಿ-5 ರಿಂದ 7 ರವರಿಗೂ 1 ನೇ ಆರೊಪಿಗೂ ಯಾವುದೇ ರೀತಿಯ ಸಂಬಂಧ ಇಲ್ಲ ಎನ್ನುವುದು ಸರಿಯಲ್ಲ. ಒಂದು ಡಕಾಯಿತಿ ಕೇಸನ್ನು ದಾಖಲು ಮಾಡಬೇಕು ಎಂಬ ಒಂದೇ ಕಾರಣಕ್ಕೆ ಆರೋಪಿ-5 ರಿಂದ 7 ರವರನ್ನು ಈ ಕೇಸಿನಲ್ಲಿ ಸಿಲುಕಿಸಿದ್ದೇನೆ ಎನ್ನುವುದು ಸರಿಯಲ್ಲ.

**ಪಾಟೀಸವಾಲುಃ- ಆರೋಪಿ 1 ರಿಂದ 4 ರವರ ಪರವಾಗಿ ಶ್ರೀ.ಎಸ್.ಪಿ. ವಕೀಲರಿಂದಃ ಕೋರಿಕೆಯ ಮೇರೆಗೆ ಮುಂದೂಡಲಾಗಿದೆ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಗೋಪಾಲ ಕೃಷ್ಣ ರೈ ಟಿ.)

3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ.